# ಅಕ್ಷಯಜಲದ ಗೋಲಬಾವಿ!

ಉತ್ತರ ಕನ್ನಡದ ಸಿದ್ದಾಪುರದ ಬಿಳಗಿಯಲ್ಲಿ ‘ಗೋಲಬಾವಿ’ ಹೆಸರಿನ ಪುರಾತನ ಬಾವಿಯೊಂದಿದೆ. ಎಂಥ ದುರ್ಗಮ ಬೇಸಿಗೆಯಲ್ಲೂ ನೀರಿನಿಂದ ನಳನಳಿಸುವ ಈ ಬಾವಿ ತನ್ನ ಸೌಂದರ್ಯ ಹಾಗೂ ಚಾರಿತ್ರಿಕ ಹಿನ್ನೆಲೆಯಿಂದ ಗಮನಸೆಳೆಯುತ್ತದೆ.



■ ಚಿತ್ರ–ಲೇಖನ: **ರಾಮಕೃಷ್ಣ ಸಿದ್ರಪಾಲ**

ಎಲ್ಲೆಡೆ ಈಗ ರಣಬಿಸಿಲು. ನೀರಿನ ಸೆಲೆಗಳು ಬತ್ತಿವೆ. ಕುಡಿಯುವ ನೀರಿಗೂ ತತ್ವಾರ. ನದಿ, ತೊರೆ, ಕೆರೆ, ಬಾವಿಗಳು ಒಣಗಿವೆ. ಅಲ್ಲೊಂದು ಇಲ್ಲೊಂದು ನೀರಿನ ಸೆಲೆ ಇನ್ನೂ ಉಳಿದುಕೊಂಡಿವೆ. ಉತ್ತರ ಕನ್ನಡದ ಸಿದ್ದಾಪುರದ ಬಿಳಗಿಯಲ್ಲಿ ಪುರಾತನ ಕಾಲದ ಬಾವಿಯೊಂದಿದೆ. ಇಂಥ ರಣಬಿಸಿಲಿನಲ್ಲಿಯೂ ಅದರಲ್ಲಿನ ನೀರು ಬತ್ತಿಲ್ಲ; ಬತ್ತಿದ್ದನ್ನು ಯಾರೂ ಕಂಡಿಲ್ಲ.

‘ಗವಿ ಬಾವಿ’, ‘ನೆಲಮಾಳಿಗೆ ಬಾವಿ’, ‘ಗೋಲಬಾವಿ’ ಎಂದು ಕರೆಯುವ ಈ ಬಾವಿಯ ವಿನ್ಯಾಸ ನಿಜಕ್ಕೂ ಕುತೂಹಲಕಾರಿಯಾಗಿದೆ. ಹಾಗಂತ ಇದು ಅಕ್ಷರಶಃ ಗೋಲಾಕಾರವಾಗೇನೂ ಇಲ್ಲ. ಹೊರನೋಟಕ್ಕೆ ಇಲ್ಲೊಂದು ಬಾವಿಯಿರಬಹುದು ಎನ್ನುವುದನ್ನು ಊಹಿಸಲಿಕ್ಕೂ ಸಾಧ್ಯವಿಲ್ಲ. ಅಂತಹ ಕುರುಹೂ ಕಾಣುವುದಿಲ್ಲ. ಸಮೀಪ ಹೋಗಿ ಇಣುಕಿ ನೋಡಿದರೆ ಅರೆಕ್ಷಣ ಎದೆ ಝಲ್ಲೆನ್ನುತ್ತದೆ. ಜನರ ಧ್ವನಿಗೆ ಬಾವಿಯೊಳಗಿನ ಮಾಳಿಗೆಯಿಂದ ಒಂದಿಷ್ಟು ಬಾವಲಿಗಳು ರೆಕ್ಕೆ ಬಡಿದು ಹಾರಾಡಿ ನಿಮ್ಮೊಳಗೊಂದು ಅವ್ಯಕ್ತಭಾವ ಮೂಡಿಸುತ್ತವೆ.

ಕ್ರಿ.ಶ. 1790ರಲ್ಲಿ ಬಿಳಗಿ ರಾಜ ಸೋಮಶೇಖರ ತನ್ನ ಅರಮನೆಯ ಭಾಗವಾಗಿ ಈ ಬಾವಿ ಕಟ್ಟಿಸಿದ್ದ. ಅರಮನೆಯ ಸ್ನಾನಗೃಹವಾಗಿ ಇದು ಬಳಕೆಯಾಗುತ್ತಿತ್ತು. ಕ್ರಿ.ಶ. 1830ರಲ್ಲಿ ಶಾಂತವೀರರಾಯರು ಈ ಬಾವಿಯಿಂದ ಕಾರಂಜಿ ಪುಟಿಯುವಂತೆ ಮಾಡಲು ಯೋಜನೆ ರೂಪಿಸಿದ್ದರು ಎನ್ನುವುದು ಐತಿಹಾಸಿಕ ದಾಖಲೆಗಳಿಂದ ತಿಳಿದುಬರುತ್ತದೆ.

ಉತ್ತರ ಕನ್ನಡ ಜಿಲ್ಲೆಯ ಶಿರಸಿಯಿಂದ ಸಿದ್ದಾಪುರಕ್ಕೆ 38 ಕಿ.ಮೀ. ಸಿದ್ದಾಪುರದಿಂದ ಕುಮಟಾ ರಸ್ತೆಯಲ್ಲಿ 12 ಕಿ.ಮೀ. ಬಿಳಗಿ ಸಿಗುತ್ತದೆ. ಬಿಳಗಿಯ ಬಸ್ ನಿಲ್ದಾಣದಿಂದ ಕೇವಲ 100 ಮೀಟರ್ ದೂರದಲ್ಲಿ ಈ ಗೋಲ ಬಾವಿಯಿದೆ. ಈಗ ತಂತಿ ಬೇಲಿ ಹಾಕಲಾಗಿದ್ದು ಬಾವಿಯ ಸುತ್ತ ಕಟಾಂಜನ ನಿರ್ಮಿಸಲಾಗಿದೆ. ಕೆಲ ವರ್ಷಗಳ ಹಿಂದೆ ಸ್ಥಳೀಯ ಯುವಕರ ತಂಡ ಇಲ್ಲಿ ಸ್ವಚ್ಛತಾ ಕಾರ್ಯ ನಡೆಸಿ, ಗಿಡಗಂಟಿಗಳನ್ನು ಕಡಿದು, ಸುತ್ತಲೂ ತಂತಿ ಬೇಲಿ ಹಾಕಿ ಸ್ವಚ್ಛಗೊಳಿಸಿದ್ದರಿಂದ ಈಗ ಸಾರ್ವಜನಿಕರಿಗೂ ಕಾಣುವಂತಾಗಿದೆ. ಇಲ್ಲದಿದ್ದರೆ ಈ ಬಾವಿ ಪಾಳುಬಿದ್ದು ಕಣ್ಮರೆಯಾಗುತ್ತಿತ್ತು.

ಈ ಬಾವಿಯ ಬದಿಯಲ್ಲಿಯೇ ಶಿಲೆಯಲ್ಲಿ ಕೆತ್ತಿದ ವಿನ್ಯಾಸದೊಂದಿಗಿನ ದೊಡ್ಡದಾದ ನೀರಿನ ಬಾನಿಯೊಂದಿದ್ದು, ಈಗ ಅದು ಒಡೆದುಹೋಗಿದೆ.



ಪುರಾತನ ಗೋಲಬಾವಿ